ದಿನಾಂಕಃ 21.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **7**(ಎ) ರಿಂದ **(**ಡಿ**), 8** ರಿಂದ **12** ಮತ್ತು **14** ನೇ ಪ್ರತಿವಾದಿಗಳ ಪರ ವಕೀಲರಿಂದಃ

1988 ರಿಂದ ಇಲ್ಲಿಯವರೆಗೆ ನಾನು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದೇನೆ. 1 ನೇ ವಾದಿ ಬಿ.ಎ. ಪದವಿ ಮುಗಿಸಿದ್ದಾರೆ, 2 ನೇ ವಾದಿ 10 ನೇ ತರಗತಿ ಮುಗಿಸಿದ್ದಾರೆ, 3 ನೇ ಪ್ರತಿವಾದಿ 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಮತ್ತು 4 ನೇ ಪ್ರತಿವಾದಿ ಬಿ ಎ ಪದವಿದರ. ಇವರೆಲ್ಲಾ ವಿದ್ಯಾಭ್ಯಾಸದ ಖರ್ಚು ಅಂದಾಜು 20 ಸಾವಿರ ಬರುತ್ತದೆ. ಸದರಿ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ನಿಮ್ಮ ಸಂಬಳದಿಂದ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಾನು ಸಂಬಳವನ್ನು ತಂದು ನನ್ನ ಹೆಂಡತಿಗೆ ಕೊಡುತ್ತಿದ್ದೆ ಅವರು ಕೊಟ್ಟಿದ್ದಾರೆಂದು ನುಡಿಯುತ್ತಾರೆ. 1992 ರಲ್ಲಿ ಕೊಲೆಯಾಯಿತು ಆಗ ನಾನು ಬೇರೆ ಆದೆ. ಬೇರೆಯಾದ ಬಗ್ಗೆ ದಾಖಲೆ ಕೊಟ್ಟಿಲ್ಲ, ಕೊಲೆಯಾದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. 1999 ರಲ್ಲಿ ನಾನು ಸೊಸಾಯಿಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ.

2. ಸರ್ವೆ ನಂ.61/2 ರ ಜಮೀನು ರಾಮಚಂದ್ರ ಯಮನಪ್ಪ ಸಾಯನ್ನವರ್ ಮಾಲೀಕತ್ವದಲ್ಲಿತ್ತು. ನಮ್ಮ ಸೊಸಾಯಿಟಿಯಲ್ಲಿ ನಾನು ನೌಕರನಾಗಿದ್ದ ಕಾರಣ ಸದರಿ ಸಾಯನ್ನವರ್‌ರವರ ಸಾಲದ ಖಾತೆಗೆ ನಾನು ಹಣ ತುಂಬಲು ಬರುವುದಿಲ್ಲವೆಂದರೆ ಸರಿ. ಸಾಯನ್ನವರ್ ಖಾತೆಗೆ ಹಣವನ್ನು ನಮ್ಮ ಗುಮಾಸ್ತರು ತುಂಬಿರುತ್ತಾರೆ. ಅವರ ಹೆಸರು ಭರಮಪ್ಪ ಹರಿಜನ್‌ರವರು ತುಂಬಿರುತ್ತಾರೆ. ಅವರು ಈಗ ಜೀವಂತವಾಗಿಲ್ಲ. ಅವರು ಸೊಸಾಯಿಟಿಯಲ್ಲಿ ಗುಮಾಸ್ತನಾಗಿದ್ದರು. ಅವರು ಗುಮಾಸ್ತರಾಗಿದ್ದ ಕಾರಣ ಅವರಿಗೆ ಹಣ ತುಂಬಲು ಅಧಿಕಾರವಿಲ್ಲವೆಂದರೆ ಸಾಕ್ಷಿ ಯಾರೋ ಒಬ್ಬರು ತುಂಬಬೇಕು ನಾನು ಅವರಿಗೆ ಹಣ ಕೊಟ್ಟಿದ್ದು ಅವರು ತುಂಬಿದ್ದಾರೆನ್ನುತ್ತಾರೆ. ಸದರಿ ಹಣವನ್ನು ಎಲ್ಲಿಂದ ತಂದು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನನ್ನ ಹೆಂಡತಿ ಕಾಯಿಪಲ್ಲೆ ಮಾರಿ ಬಂದ ಹಣ ಮತ್ತು ಸಂಬಳದ ಹಣದಿಂದ ಕೂಡಿಸಿ ಆಗಾಗ ನಾನು ಸದರಿ ಹಣವನ್ನು ಕಟ್ಟಿಸಿದ್ದೇನೆ.

3. ಸಂಬಳದ ಹಣದಿಂದ ಎಷ್ಟು ಕಟ್ಟಿದ್ದೀರಿ ಕಾಯಿಪಲ್ಲೆ ಮಾರಿ ಬಂದ ಹಣದಿಂದ ಎಷ್ಟು ಕಟ್ಟಿದ್ದೀರಿ ಎಂದರೆ ಸಾಕ್ಷಿ ಸಂಬಳದ ಹಣದಿಂದ 2 ಸಾವಿರ, ಕಾಯಿಪಲ್ಲೆ ಮಾರಿ ಬಂದ ಹಣದಲ್ಲಿ 1 ಸಾವಿರ ರೀತಿಯಲ್ಲಿ ನಾನು ಆಗಾಗ ಹಣ ಕಟ್ಟಿಕೊಂಡು ಬಂದಿದ್ದೇನೆನ್ನುತ್ತಾರೆ. ಆ ರೀತಿ ನಮ್ಮ ಗುಮಾಸ್ತರು ಹಣ ಪಾವತಿಸಿರುವ ಬಗ್ಗೆ ಪಾವತಿ ರಸೀದಿಗೆ ಅವರು ಸಹಿ ಮಾಡಿಲ್ಲ ನಾನೇ ಮಾಡಿದ್ದೇನೆ. ಪಾವತಿ ರಸೀದಿಗೆ ನಾನೇ ಕಾರ್ಯದರ್ಶಿಯವರ ಸಹಿ ಮಾಡಿದ್ದೇನೆ. ನಾನು ಒಟ್ಟು ಎಷ್ಟು ಹಣ ಕೊಟ್ಟಿದ್ದೇನೆಂದು ನನಗೆ ಈಗ ನೆನಪಿಲ್ಲ. ಸೊಸಾಯಿಟಿಯಲ್ಲಿ ಸಾಲವಿದ್ದ ಬಗ್ಗೆ ನಮ್ಮ ಖರೀದಿ ಪತ್ರದಲ್ಲಿ ಬರೆಸಿಲ್ಲ. ಯಾಕೆ ಬರೆಸಿಲ್ಲವೆಂದರೆ ಸಾಕ್ಷಿ ಅವರು ಬಾಯಿಮಾತಿನಲ್ಲಿ ಹೇಳಿದರು ನಾನು ಬಾಯಿಮಾತಿನ ಮೇಲೆ ಸಾಲ ತೀರಿಸಿದ್ದೇನೆನ್ನುತ್ತಾರೆ. ಈ ರೀತಿ ನಾನು ನನ್ನ ತಕರಾರಿನಲ್ಲಿ ಬರೆಸಿಲ್ಲ. ಆ ರೀತಿ ಬರೆಸಲು ನನಗೆ ಏನು ಅಡಚನೆ ಇರಲಿಲ್ಲ. ಆ ಜಮೀನಿನ ಮೇಲೆ ಯಾವುದೇ ಸಾಲ ಇರಲಿಲ್ಲ ನಾನು ನನ್ನ ಗುಮಾಸ್ತರು ಸೇರಿಕೊಂಡು ಕಥೆ ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ನಾನು ಕಾಯರ್ದರ್ಶಿಯಾಗಿ ಕೆಲಸ ಮಾಡುತ್ತಿದ್ದು, ಮನೆಯ ವ್ಯವಹಾರವನ್ನೆಲ್ಲಾ ನಾನೇ ನೋಡುತ್ತಿದ್ದ ಕಾರಣ ನನ್ನ ಸಹೋದರರೆಲ್ಲಾ ಜಮೀನಿನಲ್ಲಿ ದುಡಿಮೆ ಮಾಡಿ ಬಂದ ಆದಾಯವನ್ನು ನನಗೆ ಕೊಡುತ್ತಿದ್ದು, ಅದರಿಂದ ನಾನು ಮೇಲೆ ಹೇಳಿದ ಜಮೀನನ್ನು ಖರೀದಿ ಮಾಡಿದ್ದೇನೆಂದರೆ ಸರಿಯಲ್ಲ, ನಾನೇ ಸ್ವಂತ ಮಾಡಿದ್ದೇನೆ. ನಿಡಿ47 ಮತ್ತು 48ರಲ್ಲಿ ನಿಮ್ಮ ಉದ್ಯೋಗ ಒಕ್ಕಲುತನ ಎಂದು ತೋರಿಸಿದೆ ಎಂದರೆ ಸಾಕ್ಷಿ ನಾನು ಒಕ್ಕಲುತನವನ್ನು ಸಹ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಪತ್ರಗಳಲ್ಲಿ ನಿಮ್ಮ ನೌಕರಿ ಮಾಡುತ್ತಿದ್ದ ಬಗ್ಗೆ ಬರೆದಿಲ್ಲವೆಂದರೆ ಸಾಕ್ಷಿ ನನ್ನ ಮೂಲ ಕೆಲಸ ಒಕ್ಕಲುತನ ಎನ್ನುತ್ತಾರೆ. ನಿಡಿ2 ರಿಂದ 33ರಲ್ಲಿ ಸೆಕ್ರೇಟರಿ ಎಂದು ಇರುವ ಕಡೆ ನೀವು ಸಹಿ ಮಾಡಿಲ್ಲವೆಂದರೆ ಸಾಕ್ಷಿ ಅಲ್ಲಿ ಪಿ ಎಲ್ ಡಿ ಬ್ಯಾಂಕ್‌ನ ಸೆಕ್ರೇಟರಿಯವರು ಸಹಿ ಮಾಡಿದ್ದಾರೆ ಎಡಭಾಗದಲ್ಲಿ ಪಾರ್ಟಿಯಾಗಿ ನಾನು ಸಹಿ ಮಾಡಿದ್ದೇನೆನ್ನುತ್ತಾರೆ.

5. ಸಹಿ ಮಾಡಿರುವ ಕಾರ್ಯದರ್ಶಿಗಳು ಇದಾರೋ ಇಲ್ಲವೋ ನನಗೆ ಗೊತ್ತಿಲ್ಲ ಅವರು ನಿವೃತ್ತಿ ಹೊಂದಿರುತ್ತಾರೆ. ಅವರನ್ನು ನಾನು ಸಾಕ್ಷಿಯಾಗಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಕೇಳಿ ಹೇಳಬೇಕು ಎನ್ನುತ್ತಾರೆ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನೀವು ಎದುರಿಸಿ ಬೆದರಿಸಿ ರಾಜಿ ಅರ್ಜಿಗೆ ಸಹಿ ಪಡೆದುಕೊಂಡಿರುವ ಬಗ್ಗೆ ಆ ದಾವೆ ಮುಕ್ತಾಯವಾದ ನಂತರ ಅವರ ವಿರುದ್ಧ ಪಿರ್ಯಾದೆ ದಾಖಲೆ ಮಾಡಿದ್ದೀರಾ ಎಂದರೆ ಸಾಕ್ಷಿ ಅದಾದ ನಂತರ ನನಗೆ ಅವರು ಹೊಡೆದಿದ್ದು ನಾನು ಪೋಲಿಸ್‌ಠಾಣೆಗೆ ದೂರು ದಾಖಲು ಮಾಡಿ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎನ್ನುತ್ತಾರೆ. ಅವರು ನನ್ನ ವಿರುದ್ದ ದೂರು ಕೊಟ್ಟಿದ್ದಾರೆಂದರೆ ಸರಿ. ಅದು ಸಹ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಬಿ ಎಮ್ ಕಲ್ಲೋಳಿ ವಕೀಲರ ಮೂಲಕ ದಿಃ 11.08.2016 ರಂದು ಸದರಿ ರಾಜಿ ಡಿಕ್ರಿಯನ್ನು ರದ್ದು ಮಾಡಲು ದಾವೆ ಸಲ್ಲಿಸಿದ್ದೇನೆಂದರೆ ಸರಿ. ಆ ದಾವೆಯಲ್ಲಿ ನಮ್ಮ ಮನೆತನದ ವಂಶಾವಳಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಗೆ ಬರುತ್ತಿಲ್ಲವೆನ್ನುತ್ತಾರೆ.

6. ಒಂದು ವಾದಪತ್ರದ ದೃಢಿಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಅದರ ಮೇಲಿರುವ ಸಹಿಗಳನು ತನ್ನವೆಂದು ಸಾಕ್ಷಿ ಒಪ್ಪಿಕೊಂಡಿದ್ದು, ಸದರಿ ವಾದಿಪತ್ರವನ್ನು ನಿಡಿ49 ಎಂದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಡಿ49(ಎ) ರಿಂದ (ಜೆ) ಎಂದು ಗುರುತಿಸಲಾಯಿತು. ಸದರಿ ವಾದಪತ್ರದ ವಂಶಾವಳಿಯಲ್ಲಿ ನನ್ನ ಹೆಣ್ಣುಮಕ್ಕಳ ಹೆಸರುಗಳನ್ನು ತೋರಿಸಿಲ್ಲವೆಂದರೆ ಸರಿ. ಸದರಿ ವಾದಪತ್ರ ಸಲ್ಲಿಸಿದ ದಾವೆಯನ್ನು ವಜಾ ಮಾಡಿದ್ದಾರೆಂದರೆ ಸಾಕ್ಷಿ ನಾನು ತಡವಾಗಿ ಸಲ್ಲಿಸಿದ್ದೇನೆಂದು ವಜಾ ಮಾಡಿದ್ದಾರೆನ್ನುತ್ತಾರೆ. ರಾಜಿ ಅರ್ಜಿಯ ಮೇಲೆ ಡಿಕ್ತಿಯಾದ ದಾವೆಯಲ್ಲಿ ನಾನು ಶ್ರಿ. ಪಿ.ಎಮ್.ಎಚ್ ವಕೀಲರ ಮೂಲಕ ಅರ್ಜಿ ಸಲ್ಲಿಸಿರುವುದು ನನಗೆ ನೆನಪಿಗೆ ಬರುತ್ತಿಲ್ಲ. ಸಾಕ್ಷಿಗೆ ಒಂದು ಅರ್ಜಿಯ ದೃಢಿಕೃತ ನಕಲಿನಲ್ಲಿರುವ ಸಹಿಗಳನು ತೋರಿಸಿದ್ದು, ಅದನ್ನು ಸಾಕ್ಷಿ ತನ್ನ ಸಹಿ ಎಂದು ನೋಡಿ ಗುರುತಿಸಿದ್ದು ಸದರಿ ಅರ್ಜಿಯನ್ನು ನಿಡಿ50 ಎಂದು, ಸಾಕ್ಷಿಯ ಸಹಿಗಳನ್ನು ನಿಡಿ5( ಎ) ಎಂದು (ಡಿ) ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ